**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಪಿಡಬ್ಲು : 12 ಸಿಡಬ್ಲು : 11

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ಗೌರಿಶಂಕರ ಪೋಳ |
| ತಂದೆಯ ಹೆಸರು | : | ದಿವಂಗತ ಶ್ರೀ.ಲಕ್ಷ್ಮಣ |
| ವಯಸ್ಸು | : | 83 ವರ್ಷ |
| ಉದ್ಯೋಗ | : | ಫ್ಲೋರ ಮಿಲ್ ಮಾಲೀಕ |
| ವಾಸ್ತವ್ಯ | : | ಜತ್ರಾಟ್ ವೇಸ್ , ನಿಪ್ಪಾಣಿ |
| ದಿನಾಂಕ | : | 02-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಸಾಕ್ಷಿಗೆ ಮರಾಠಿ ಭಾಷೆ ಹೊರತುಪಡಿಸಿ ನ್ಯಾಯಾಲಯದ ಭಾಷೆಯಾದ ಕನ್ನಡ, ಆಂಗ್ಲ ಭಾಷೆ ತಿಳಿಯದೇ ಇರುವುದರಿಂದ ಮರಾಠಿ ಭಾಷೆಯನ್ನು ಚೆನ್ನಾಗಿ ಮಾತನಾಡಲು ಮತ್ತು ಬರೆಯಲು ಬಲ್ಲವರಾದಂತಹ ಶ್ರೀ.ಎಸ್.ಎಸ್.ಜೆ ವಕೀಲರು ಬೆಳಗಾವಿ ವಕೀಲರ ಸಂಘ ಇವರನ್ನು ಭಾಷಾಂತರಕಾರರಾಗಿ ನೇಮಕ ಮಾಡಲಾಯಿತು. ಸದರಿ ವಕೀಲರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

(3 ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

## ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ನನಗೆ 4 ಜನ ಮಕ್ಕಳಿದ್ದು, ಅದರಲ್ಲಿ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಇಬ್ಬರೂ ಗಂಡು ಮಕ್ಕಳ ಪೈಕಿ ಅರವಿಂದ ಪೋಳ ಎನ್ನುವ ನನ್ನ ಮಗ ಕೊಲೆಯಾಗಿ ಮೃತನಾಗಿದ್ದಾನೆ. ನನ್ನ ಇನ್ನೊಬ್ಬ ಮಗನ ಹೆಸರು ಅಜಿತ ಪೋಳ ಚಾಸಾಃ 10. ಚಾಸಾಃ 12 ಸುಮನ್ ಪೋಳ ನನ್ನ ಹೆಂಡತಿ. ಚಾಸಾಃ 13 ಭಜರಂಗ, ಚಾಸಾಃ 14 ಸುನೀಲ ಅವರು ನನಗೆ ಪರಿಚಯ ಇರುತ್ತಾರೆ. ಅವರು ನಮ್ಮ ಮನೆಯ ಹತ್ತಿರ ಇರುತ್ತಾರೆ. ನಾನು ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ 1 ಮತ್ತು 2 ನೇ ಆರೋಪಿತರನ್ನು ಮತ್ತು ವಿಡಿಯೋ ಕಾನ್ಸರೆನ್ಸಿಂಗ ಮುಖಾಂತರ ಹಾಜರಾಗಿರುವ 3ನೇ ಆರೋಪಿಯನ್ನು ನೋಡಿರುವುದಿಲ್ಲ, ಆದರೆ ಒಬ್ಬ ಆರೋಪಿ ಹೆಸರು ಸಾಗರ ಎನ್ನುವುದು ಮಾತ್ರ ನನಗೆ ಗೊತ್ತಿರುತ್ತದೆ.

2. ದಿನಾಂಕಃ 31-03-2019 ರಂದು ಕೊಲೆಯಾದ ನನ್ನ ಮಗನನ್ನು ಜೀವಂತ ಇದ್ದಾಗ ನೋಡಿದ್ದೇನೆ. ದಿನಾಂಕಃ 31-03-2019 ರಂದು ಮಧ್ಯಾಹ್ನ 12:30 ಕ್ಕೆ ನನ್ನ ಮಗ ಅರವಿಂದ ಪೋಳ ಮನೆಯಲ್ಲಿದ್ದನು, ಆತನಿಗೆ ಕ್ಷೀರಸಾಗರ ಎನ್ನುವವರು ಪೋನ ಮಾಡಿದರು, ಆಗ ನನ್ನ ಮಗ ಮನೆಯಿಂದ ಹೊರಗೆ ಹೋಗಿದ್ದಾನೆ,ನಂತರ ಮನೆಗೆ ವಾಪಸ್ ಬಂದಿರುವುದಿಲ್ಲ. ಆ ದಿನ ಮಧ್ಯಾಹ್ನ 2:30 ರ ಸಮಯದಲ್ಲಿ ಮನೆಯಲ್ಲಿ ನಾವೆಲ್ಲರೂ ಊಟಕ್ಕೆ ಕುಳಿತಾಗ ನನ್ನ ಸೊಸೆ, ನನ್ನ ಮಗ ಅರವಿಂದ ಪೋಳನಿಗೆ ಊಟಕ್ಕೆ ಬರುವಂತೆ ಕರೆಯಲು ಪೋನ ಮಾಡಿದ್ದಳೆಂದು ಆತ ಪೋನ ಸ್ವೀಕರಿಸಿಲ್ಲ ಎಂದು ಎಲ್ಲೋ ಮೀಟಿಂಗನಲ್ಲಿ ಇರಬಹುದು ಎಂದು ನನ್ನ ಸೊಸೆ ಸುಮ್ಮನಾದಳು.

3. ಆ ದಿನ ಸಂಜೆ ನನ್ನ ಸೊಸೆ ಮತ್ತು ನನ್ನ ಇನ್ನೊಬ್ಬ ಮಗ ಅರವಿಂದನಿಗೆ ಪೋನ ಮಾಡಿದರು ಪೋನ ರಿಂಗ್ ಆಗುತ್ತಿತ್ತು ಆದರೆ ಪೋನ ತೆಗೆಯಲಿಲ್ಲ. ನಾನು, ನಮ್ಮ

ಮನೆಯವರೆಲ್ಲರೂ ಸೇರಿ ಹುಡುಕಾಡಿದೇವು ಆದರೆ ಎಲ್ಲಿಯೂ ಸಿಗಲಿಲ್ಲ. ಆ ದಿನ ರಾತ್ರಿ 12:00 ಗಂಟೆಯಿಂದ ಮರುದಿನ ಬೆಳಗಿನ ಜಾವ 1:00ಗಂಟೆ ಸಮಯದಲ್ಲಿ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇವೆ. ಪೋಲಿಸರು ನನ್ನ ಮಗನನ್ನು ಹುಡುಕಲು ಪ್ರಾರಂಭಿಸಿದರು.

4. ಮರುದಿನ ದಿನಾಂಕಃ 01-04-2019 ರಂದು ಪೋಲಿಸರು ನನಗೆ ಊರಿನ ಹೊರಗೆ ನನ್ನ ಮಗನ ಗಾಡಿ ಮತ್ತು ಮೊಬೈಲ ಇದೆ ಎಂದು ಪೋಲಿಸರು ನನಗೆ ತಿಳಿಸಿದರು. ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ, ಅದು ಯಾವ ಊರು ಎಂದೂ ಸಹ ನನಗೆ ಗೊತ್ತಿಲ್ಲ. ನನಗೆ ಕಷ್ಟ ಆಗುತ್ತದೆ ಎಂದು ನನ್ನ ಮಗನ ವಿಚಾರವನ್ನು ನಮ್ಮ ಮನೆಯವರು ನನಗೆ ಏನೂ ಹೇಳಿರುವುದಿಲ್ಲ.

5. ದಿನಾಂಕಃ 02-04-2019 ರ ಮಧ್ಯಾಹ್ಣ ನನ್ನ ಮಗ ಅರವಿಂದನ ಕೊಲೆ ಆಗಿದೆ ಎಂದು ನಮ್ಮ ಗಿರಣಿಗೆ ಬರುವ ಜನರು ಮಾತನಾಡುತ್ತಿದ್ದಾಗ ನನಗೆ ಗೊತ್ತಾಯಿತು. ಒಂದೆರೆಡು ಸಾರಿ ಪೋಲಿಸರು ನಮ್ಮ ಮನೆಗೆ ಬಂದು ನನ್ನ ಹೇಳಿಕೆಯನ್ನು ಪಡೆದು ಕೊಂಡಿರುತ್ತಾರೆ.

6. ನನ್ನ ಮಗ ಅಜಿತ ಸಹ ನನ್ನ ಮಗ ಅರವಿಂದನ ಕೊಲೆ ಯಾವ ಕಾರಣಕ್ಕೆ ಆಯಿತು ಎಂದು ಏನೂ ಹೇಳಿರುವುದಿಲ್ಲ. ಕೊಲೆಯಾದ ನನ್ನ ಮಗನ ಯಾವುದೇ ವಸ್ತುಗಳನ್ನು ನನಗೆ ತೋರಿಸಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ದಿನಾಂಕಃ 04-04-2019 ರಂದು ಬಸವೇಶ್ವರ ಚೌಕ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಕೊಲೆಯಾದ ನನ್ನ ಮಗನ ಕುತ್ತಿಗೆಯಲ್ಲಿದ್ದ ಬಂಗಾರದ ಚೈನು ಮತ್ತು ಕೈಬೆರಳುಗಳಲ್ಲಿದ್ದ ಎರಡು ಉಂಗುರುಗಳನ್ನು ಆರೋಪಿತರಿಂದ ವಶಪಡಿಸಿಕೊಂಡಿದ್ದೇವೆ ಎಂದು ಪೋಲಿಸರು ನನಗೆ ತೋರಿಸಿದರು ಎನ್ನುವುದು ಸರಿ. ನಾನು ಅವುಗಳನ್ನು ನ್ಯಾಯಾಲಯದ ಆದೇಶದ ಪ್ರಕಾರ ಮಧ್ಯಂತರ ವಶಕ್ಕೆ ಪಡೆದುಕೊಂಡು ನಾನು ಅವುಗಳನ್ನು ಬ್ಯಾಂಕ ಲಾಕರ್ ನಲ್ಲಿ ಇರಿಸಿದ್ದೇನೆ. ನಾನು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ಸಾಕ್ಷಿಯು ಬಂಗಾರದ ಒಡವೆಗಳನ್ನು ಇಂದು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದು, ಅವುಗಳನ್ನು ಗುರುತಿಸುವಿಕೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.